**ಒಂದನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ, ನ್ಯಾಯಾಲಯ, ಗುಂಡ್ಲುಪೇಟೆ**

**ಅಸಲು ದಾವೆ ಸಂಖ್ಯೆ: 136/2020**

| | | | |
|---|---|---|---|
| ಹೆಸರು | | ಶ್ರೀ ಮಹೇಶ್ ಟಿ.ಎಸ್. | |
| ತಂದೆ ಹೆಸರು | | ಶ್ರೀ ಮುದ್ದಪ್ಪ | CW- 01 |
| ವಯಸ್ಸು | | 49 ವರ್ಷ | ಸಾಕ್ಷಿಯನ್ನು ದಿನಾಂಕಃ 30.04.2026 ರಂದು ಪ್ರಮಾಣೀಕರಿಸಲಾಯಿತು. |
| ಉದ್ಯೋಗ | | ತಾಲ್ಲೂಕು ಸರ್ವೇಯರ್ | |
| ವಾಸ | | ಗುಂಡ್ಲುಪೇಟೆ ಟೌನ್ | |

**ದಿನಾಂಕಃ 30.04.2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ**

2013 ರಿಂದ ನಾನು ಗುಂಡ್ಲುಪೇಟೆಯಲ್ಲಿ ತಾಲ್ಲೂಕು ಸರ್ವೇಯರ್ ಆಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ.

ನನ್ನನ್ನು ನ್ಯಾಯಾಲಯದಿಂದ ನಿಯೋಗಿಯಾಗಿ ಈ ದಾವೆಗೆ ನೇಮಿಸಲಾಯಿತು. ನಂತರ ನಾನು ವಾದಿ, ಪ್ರತಿವಾದಿಗಳು ಮತ್ತು ವಕೀಲರಿಗೆ ಮುಂಚಿತವಾಗಿ ನೋಟೀಸ್ ನೀಡಿ, ಬೆಳವಾಡಿ ಗ್ರಾಮದ ಸರ್ವೇ ನಂಃ 32/3 ರ ಜಮೀನನ್ನು ಅಳತೆ ಮಾಡಲು ಹೋಗಿರುತ್ತೇನೆ. ಅಳತೆ ಕಾರ್ಯವನ್ನು ಮುಗಿಸಿರುತ್ತೇನೆ. ನನ್ನ ವರದಿಗೆ ವಾದಿ ಸಹಿ ಮಾಡಿರುತ್ತಾರೆ. ಪ್ರತಿವಾದಿ ಸಹಿ ಮಾಡಿರುವುದಿಲ್ಲ. ಸಾಕ್ಷಿಯು ವರದಿಯನ್ನು ನೋಡಿ ಗುರುತಿಸಿದ್ದು, ಅದನ್ನು ನಿಸಿ-1 ಎಂದು, ಸಾಕ್ಷಿಯ ಸಹಿಯನ್ನು ನಿಸಿ1(ಎ) ಎಂದು ಗುರ್ತಿಸಲಾಯಿತು. ಪ್ರಕ್ರೀಯೆಗಳನ್ನು ಅನುಸರಿಸಿ ವರದಿಯನ್ನು ತಾಯಾರಿಸಿರುತ್ತೇನೆ. ಸದರಿ ವರದಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ.

**ಪಾಟೀ ಸವಾಲು : ಪ್ರತಿವಾದಿ ಪರ ವಕೀಲರಿಂದ**

ಸರ್ವೇ ನಂಃ 32/2 ನ್ನು ವಾದಿ ವ್ಯವಸಾಯ ಮಾಡುತ್ತಿರುವುದಾಗಿ ಹೇಳಿದರು. ಸದರಿ ಜಮೀನಿನಲ್ಲಿ ಬಾಳೆ ಬೆಳೆ ಬೆಳೆದಿದ್ದರು. ಸದರಿ ಸರ್ವೇ ನಂಬರ್ ನ ದಾಖಲೆಗಳನ್ನು ನಾನು ಪರಿಶೀಲಸಿಲ್ಲ ಮತ್ತು ವಾದಿ ಹಾಜರುಪಡಿಸಿಲ್ಲ. ಸರ್ವೇ ನಂಃ 32/3 ರ ಜಮೀನಿನಲ್ಲಿ ಸರ್ವೇ ನಂಃ 32/2 ಕ್ಕೆ ಹೋಗಲು ರಸ್ತೆ ಇಲ್ಲ. ಸರ್ವೇ ನಂಃ 32/3 ಸಂಪೂರ್ಣ ಕೃಷಿ ಜಮೀನು ಎಂದರೆ ಸರಿ. ನ್ಯಾಯಾಲಯವು ನಾನು ಸ್ಥಳವನ್ನು ಪರಿಶೀಲಿಸಿ ರಸ್ತೆ ಇದೇಯಾ ಅಥವಾ ಇಲ್ಲವಾ ಎಂಬ ಬಗ್ಗೆ ವರದಿ ನೀಡುವಂತೆ ಆದೇಶಿಸಿತ್ತು ಎಂದರೆ ಸರಿ. ಸರ್ವೇ ನಂಃ 32/3 ರಲ್ಲಿ ಉತ್ತರ ದಿಕ್ಕಿಗೆ ರಸ್ತೆ ಇದೆ ಎಂದು ತೋರಿಸಲು ನನಗೆ ಸೂಚನೆ ಇರಲಿಲ್ಲ ಎಂದರೆ ಸಾಕ್ಷಿ ವಾದಿ ಸೂಚಿಸಿದ್ದರು ಎಂದು ನುಡಿಯುತ್ತಾರೆ. ನ್ಯಾಯಾಲಯದ ಆದೇಶ ಇಲ್ಲದೆ ನಾನು ನನ್ನ ವರದಿಯಲ್ಲಿ ರಸ್ತೆಯನ್ನು ನಮೂದಿಸುವಂತಿಲ್ಲ ಎಂದರೆ ಸಾಕ್ಷಿ ವಾದಿಯ ಕೋರಿಕೆಯಂತೆ ನಮೂದಿಸಿದ್ದೇನೆ, ಆದರೆ ನನ್ನ ವರದಿಯಲ್ಲಿ ರಸ್ತೆ ಇಲ್ಲ ಎಂದು ಬರೆದಿದ್ದೇನೆ. ನನ್ನ ವರದಿ ವಾಸ್ಥವಿಕತೆಗೆ ಅನುಗುಣವಾಗಿಲ್ಲ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲಃ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇ ಎ ಒ

**(ಗಿರೀಶ ಆರ್.ಬಿ)**

ಒಂದನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ

ಗುಂಡ್ಲುಪೇಟೆ